

ಉತ್ಪಾದನೆಗೆ ಮೊದಲಿಗೆ ಆಯ್ಕೆ ಮಾಡಿದ್ದ ಜಾಗ ಪಶ್ಚಿಮ ಬಂಗಾಲದ ಶಿಂಗೂರು. ಆದರೆ ಪಶ್ಚಿಮ ಬಂಗಾಲದ ಸರ್ಕಾರ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಟಾಟಾರಿಗೆ ಅಕ್ರಮವಾಗಿ ಕೊಟ್ಟಿದೆ ಎಂದು ವ್ಯಾಪಕ ವಿರೋಧ ವ್ಯಕ್ತವಾಯಿತು, ಧರಣಿ ಪ್ರದರ್ಶನಗಳು ನಡೆದುವು. ಆ ಪ್ರತಿಭಟನೆ ಪ್ರದರ್ಶನದಲ್ಲಿ ಮುಂಚೂಣಿಯಲ್ಲಿದ್ದವರು ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಮತ್ತು ರೈತರ ಹಕ್ಕುಗಳಿಗಾಗಿ ಹೋರಾಡುತ್ತಿದ್ದ ಅನುರಾಧಾ ತಲ್ವಾರ್. ಪಾಟ್ಕರ್ ಮತ್ತ ತಲ್ವಾರ್ ಇಬ್ಬರೂ ಟಾಟಾ ಸಮೂಹ ನಿರ್ಮಿಸಿದ್ದ ‘ಟಾಟಾ ಸಮಾಜ ವಿಜ್ಞಾನ ಸಂಸ್ಥೆ’ಯಲ್ಲಿ ಓದಿದವರು. ಅನುರಾಧಾ ತಲ್ವಾರ್ ನಡೆಸುತ್ತಿದ್ದ ಸ್ವಯಂ ಸೇವಾಸಂಸ್ಥೆಗೆ ಆ ಸಮಯಕ್ಕೆ ಟಾಟಾ ದತ್ತಿನಿಧಿಗಳಿಂದ ದೇಣಿಗೆಯೂ ಬಂದಿತ್ತು. (ಆಗ ವಿರೋಧ ಪಕ್ಷದಲ್ಲಿದ್ದ) ಪಶ್ಚಿಮ ಬಂಗಾಲದ ಈಗಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೂಡ ಈ ಯೋಜನೆಯನ್ನು ಪ್ರತಿಭಟಿಸಿದ್ದರು. ಆಗಿನ ಸಮಯಕ್ಕೆ ಮಮತಾರ ಪಕ್ಷ– ತೃಣಮೂಲ ಕಾಂಗ್ರೆಸ್‌ಗೆ ಟಾಟಾ ಸಂಸ್ಥೆಗಳ ವತಿಯಿಂದ ದೇಣಿಗೆ ಕೊಡಲಾಗಿತ್ತು.

ಹೀಗೆ ಟಾಟಾ ತಮ್ಮ ವಿರೋಧಿಗಳನ್ನು ತಾವೇ ಸೃಷ್ಟಿಸಿಕೊಂಡಿದ್ದರು! ಶಿಂಗೂರಿನ ಪ್ರತಿಭಟನೆಯ ಫಲವಾಗಿ ಟಾಟಾ ಜಮೀನನ್ನು ಬಿಟ್ಟುಕೊಟ್ಟು ಗುಜರಾತಿನ ಸಾಣಂದಕ್ಕೆ ಹೋಗಬೇಕಾಯಿತು. ಹೀಗಾದಾಗಲೂ ಈ ಸಂಸ್ಥೆಗಳಿಗೆ ಧನಸಹಾಯ ನಿಲ್ಲಿಸುವ ಮಾತಾಡಲಿಲ್ಲ. ವ್ಯಾಪಾರಿ ಸಂಸ್ಥೆಯಾಗಿ ‘ಟಾಟಾ ಮೋಟರ್ಸ್’ ಮಾಡುತ್ತಿರುವ ಕೆಲಸಕ್ಕೂ, ಸಾಮಾಜಿಕ ಒಳಿತಿಗಾಗಿ ಟಾಟಾ ದತ್ತಿಗಳು ಕೊಡುತ್ತಿರುವ ಧನಸಹಾಯಕ್ಕೂ ತಾಳೆ ಹಾಕುವುದು ತರವಲ್ಲ ಎಂದು ರತನ್ ಟಾಟಾ ಹೇಳಿದರೆಂದು ಪ್ರತೀತಿ. ಜೊತೆಗೆ ಕೋಲ್ಕತ್ತದಲ್ಲಿ ನಿರ್ಮಿಸುತ್ತಿದ್ದ ಟಾಟಾ ಸ್ಮಾರಕ ಆಸ್ಪತ್ರೆಯ ಕೆಲಸವನ್ನೂ ನಿಲ್ಲಿಸಲಿಲ್ಲ.

ರತನ್ ಟಾಟಾ ವ್ಯಾಪಾರವನ್ನು ಎಷ್ಟು ದಕ್ಷತೆ ಮತ್ತು ಅಧಿಕಾರದಿಂದ ನಡೆಸುತ್ತಿದ್ದರೋ, ಅಷ್ಟೇ ತೀವ್ರತೆಯಿಂದ ತಮ್ಮ ಸಾಮಾಜಿಕ ಹೊಣೆಗಾರಿಕೆಯ ಕೆಲಸಗಳನ್ನೂ ನಡೆಸುತ್ತಿದ್ದರು. ಟಾಟಾ ದತ್ತಿನಿಧಿಗಳಿಂದ ಕ್ಯಾನ್ಸರ್ ಆಸ್ಪತ್ರೆ, ಮಾನಸಿಕ ಆರೋಗ್ಯದ ಕಾರ್ಯಕ್ರಮಗಳು, ಕಲೆ, ಮತ್ತು ಗ್ರಾಮೀಣ ಉಪಾಧಿಯ ಕಡೆಗೆ ವಾಲುವ ಕಾರ್ಯಕ್ರಮಗಳನ್ನು ರತನ್ ಟಾಟಾರ ನಾಯಕತ್ವದಲ್ಲಿ ಬೆಂಬಲಿಸಲಾಯಿತು. ಅದರ ಜೊತೆಗೇ ಅವರು ವ್ಯಾಸಂಗ ಮಾಡಿದ್ದ ಅಮೆರಿಕದ ಕೊರ್ನೆಲ್ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯಗಳಿಗೂ ದೇಣಿಗೆಯನ್ನು ಕೊಟ್ಟಿದ್ದರು. ಬಹುರಾಷ್ಟ್ರಗಳಲ್ಲಿ ವ್ಯಾಪಾರ ಮಾಡುತ್ತಿದ್ದ ಟಾಟಾ ಸಮೂಹದ ದತ್ತಿ ದೇಣಿಗೆಗಳೂ ಅಂತರರಾಷ್ಟ್ರೀಯ ಮಟ್ಟದಲ್ಲಿದ್ದದ್ದು ನಮಗೆ ಆಶ್ಚರ್ಯವನ್ನುಂಟು ಮಾಡಬಾರದು. ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ದತ್ತಿ ನೀಡಿದ್ದಲ್ಲದೇ, ಮುಂಬೈನ ತಾಜ್ ಲ್ಯಾಂಡ್ಸ್ ಎಂಡ್ ಹೋಟೆಲಿನಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ತರಗತಿಯ ಕೋಣೆಯ ಪ್ರತಿರೂಪವನ್ನು ನಿರ್ಮಿಸಿ, ಆ ವಿಶ್ವವಿದ್ಯಾಲಯ ಭಾರತದಲ್ಲೂ ತರಬೇತಿ ಕಾರ್ಯಕ್ರಮಗಳನ್ನು ಮಾಡಿಕೊಡಲು ಅನುವು ಮಾಡಿಕೊಟ್ಟಿದ್ದರು.

ಜೀವನದಲ್ಲಿ ಆದ ವಿವಾದಗಳ ಬಗ್ಗೆ ಅವರು ಕಟುವಾಗಿ ವರ್ತಿಸಲಿಲ್ಲ. ‘ಟಾಟಾ ಎನರ್ಜಿ ರಿಸರ್ಚ್ ಇನ್‌ಸ್ಟಿಟ್ಯೂಟ್ ಸಂಸ್ಥೆ’ಯು ತನ್ನ ಹೆಸರಿನಲ್ಲಿನ ಟಾಟಾ ಅಳಿಸಿಹಾಕಿ ಬರೇ ‘ದ ಎನರ್ಜಿ ರಿಸೋರ್ಸಸ್ ಸಂಸ್ಥೆ’ ಎಂದು ಪುನರ್ ನಾಮಕರಣ ಮಾಡಿಕೊಂಡಾಗಲೂ ಶಾಂತವಾಗಿದ್ದರು. ನೀರಾ ರಾಡಿಯಾ ಪ್ರಕರಣದಲ್ಲಿ ಸ್ವಲ್ಪ ವಿಚಲಿತವಾದಂತೆ ಕಂಡರೂ, ಯಾವುದನ್ನೂ ಬಹಿರಂಗವಾಗಿ ತೋರಿಸಿಕೊಳ್ಳಲಿಲ್ಲ. ತಮ್ಮ ಪಾಡಿಗೆ ತಾವು ಸಜ್ಜನಿಕೆಯ ಪ್ರತೀಕವಾಗಿ, ಅಂತರ್ಮುಖಿಯಾಗಿ ಒಂಟಿಯಾಗಿ ತಮ್ಮ ಪ್ರೀತಿಯ ಸಾಕು ನಾಯಿಗಳೊಂದಿಗೆ ಇದ್ದುಬಿಟ್ಟರು.

ರತನ್ ಟಾಟಾರ ಉತ್ತರಾಧಿಕಾರಿಯಾಗಿ ಅವರ (ಅರ್ಧ) ಸಹೋದರ ನೋಯಲ್ ಟಾಟಾರನ್ನು ದತ್ತಿನಿಧಿಗಳ ಮುಖ್ಯಸ್ಥರಾಗಿ ನೇಮಿಸಲಾಗಿದೆ. ಸೈರಸ್ ಮಿಸ್ತ್ರಿ ಕಾಂಡ ಮುಗಿದಾಗಿನಿಂದ – ಟಾಟಾ ಸಮೂಹದ ಮುಖ್ಯಸ್ಥರಾಗಿ ಎನ್. ಚಂದ್ರಶೇಖರನ್ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಟಾಟಾ ಸಮೂಹದ ವ್ಯಾಪಾರಿ ಸಂಸ್ಥೆಗಳು ತಮ್ಮ ಸಹಜ ಓಘದಲ್ಲಿ ವ್ಯಾಪಾರ ಮುಂದುವರೆಸುತ್ತವೆ. ಆದರೆ ಟಾಟಾ ದತ್ತಿನಿಧಿಗಳು ಯಾವ ರೀತಿಯಲ್ಲಿ ತಮ್ಮ ಸಾಮಾಜಿಕ ಕಾರ್ಯಕ್ರಮಗಳನ್ನು ನಿರ್ವಹಿಸುತ್ತವೆ ಎನ್ನುವುದರಲ್ಲಿಯೇ ಟಾಟಾ ಮೌಲ್ಯಗಳನ್ನು ಎತ್ತಿಹಿಡಿಯುವ– ಅದನ್ನು ಮುಂದುವರೆಸುವ ಕುರುಹುಗಳು ನಮಗೆ ಸಿಗುತ್ತವೆ. ಜೆಆರ್‌ಡಿ ಮತ್ತು ರತನ್ ಟಾಟಾರು ಆ ಮೌಲ್ಯಗಳನ್ನು ಕಾಪಾಡಿದ ರೀತಿಯಲ್ಲಿಯೇ ನೋಯಲ್ ಟಾಟಾ ಕೂಡ ಕಾಪಾಡುತ್ತಾರೆಯೇ ಎನ್ನುವುದನ್ನು ನಾವು ನೋಡಬೇಕಿದೆ.

ರತನ್ ಟಾಟಾ ತಮ್ಮ ನೈತಿಕಶಕ್ತಿಯ ಒಂದು ದೊಡ್ಡ ಉದಾಹರಣೆಯನ್ನು ನಮ್ಮೆದುರು ನಿಲ್ಲಿಸಿದ್ದಾರೆ. ಈ ಶಕ್ತಿಯ ಸಾಧ್ಯತೆಗಳನ್ನು ಮುಂಬರುವ ದಿನಗಳಲ್ಲಿ ಟಾಟಾ ಸಮೂಹವೂ, ಅವರಿಂದ ಪಾಠ ಕಲಿತಿರಬಹುದಾದ ಇತರ ವ್ಯಾಪಾರಿ ಸಂಸ್ಥೆಗಳೂ ಹೇಗೆ ಮೈಗೂಡಿಸಿಕೊಳ್ಳುತ್ತವೆ ಎನ್ನುವುದನ್ನು ಕುತೂಹಲದಿಂದ ನೋಡಬೇಕಿದೆ. ಟಾಟಾರ ಮರಣ ಒಂದು ತುಂಬಲಾಗದ ಕಂದರವನ್ನು ಸೃಷ್ಟಿಸಿದೆ ಎನ್ನುವುದರಲ್ಲಿ ಅನುಮಾನವಿಲ್ಲ.

**ಪ್ರತಿಕ್ರಿಯಿಸಿ: feedback@sudha.co.in**